# ಕೆಟ್ ಕಾಲ ಅಲ್ಲ ಇದು ಮೆಟ್ ಗಾಲ!



ನಟಿ ಪ್ರಿಯಾಂಕಾ ಚೋಪ್ರಾ ಮತ್ತು ಹಾಲಿವುಡ್ ಗಾಯಕ ನಿಕ್ ಜೋನಸ್ ಎಎಫ್‌ಪಿ ಚಿತ್ರಗಳು

ಬೂದು, ಬೆಳ್ಳಿ ಬಣ್ಣಗಳ ಮಿಶ್ರಣದ ವಿಶಿಷ್ಟ ವಿನ್ಯಾಸದ ಗೌನ್, ಸುರಳಿ ಸುರಳಿಯಾಗಿ, ಹಕ್ಕಿಯ ಪುಕ್ಕಗಳಂತೆ ಕೆದರಿದ ಕೇಶ ವಿನ್ಯಾಸ, ಅಚ್ಚ ಬಿಳಿ ಬಣ್ಣದಿಂದ ಶೃಂಗಾರಗೊಂಡ ಕಣ್ಣುಗಳು, ಗಾಢ ರಂಗನ್ನು ಮೆತ್ತಿಕೊಂಡ ಅಧರಗಳಲ್ಲಿ ಕಿರುನಗೆ ಹೊತ್ತು ರ್‍ಯಾಂಪ್ ಮೇಲೆ ವೈಯಾರದ ಹೆಜ್ಜೆ ಹಾಕಿರುವ ಬಾಲಿವುಡ್‌ನ ಕೃಷ್ಣಸುಂದರಿಯ ಬಗೆ ಬಗೆ ಭಾವಭಂಗಿಯ ಫೋಟೊಗಳು ಕಳೆದ ವಾರ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಮಾಡಿದವು.

ಪ್ರಿಯಾಂಕಾ ಚೋಪ್ರಾರ ಈ ಹೊಸನೋಟಕ್ಕೆ ನೆಟ್ಟಿಗರು ಬಹು ಬಗೆಯಲ್ಲಿ ಪ್ರತಿಕ್ರಿಯಿಸಿದ್ದಾರೆ. ದೆವ್ವ, ಭೂತಗಳಿಗೆ ಹೋಲಿಸಿ ಟ್ರೋಲ್ ಮಾಡಿದ್ದಾರೆ. ಮತ್ತೆ ಕೆಲವರು ಇನ್ನೂ ಮುಂದೆ ಹೋಗಿ, 'ಎಲ್ಲ ತಾಯಂದಿರು ಪಿಗ್ಗಿಯ ಈ ಫೋಟೊವನ್ನು ಕಡ್ಡಾಯವಾಗಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ಮಕ್ಕಳು ಹಾಲು ಕುಡಿಯಲು ಹಟ ಹಿಡಿದರೆ ಈ ಚಿತ್ರ ತೋರಿಸಿ ಹೆದರಿಸಬಹುದು. ದೆವ್ವದ ಕಥೆ ಹೇಳಿ ಮಲಗಿಸಬಹುದು' ಎಂದು ಕಟಕಿಯಾಡಿದ್ದಾರೆ.

ಪ್ರಿಯಾಂಕಾರ ಈ ವಿಲಕ್ಷಣ ಚರ್ಚಿತ ನೋಟಕ್ಕೆ ಸಾಕ್ಷಿಯಾಗಿದ್ದು 'ಮೆಟ್ ಗಾಲ' (Met Gala) ಎಂಬ ವಿಶ್ವದ ದೊಡ್ಡ ಫ್ಯಾಷನ್ ಹಬ್ಬ. ಪ್ರತಿವರ್ಷ ಮೇ ತಿಂಗಳ ಮೊದಲ ಸೋಮವಾರದಂದು ನ್ಯೂಯಾರ್ಕ್‌ನ 'ಮೆಟ್ರೊಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್'ನಲ್ಲಿ ನಡೆಯುವ ಈ ಫ್ಯಾಷನ್ ಶೋ, ಸೌಂದರ್ಯ ಪ್ರಿಯರಿಗಾಗಿ ಇಂತಹ ಚಿತ್ರ ವಿಚಿತ್ರ ಮೇಕಪ್, ಕಾಸ್ಟ್ಯೂಮ್‌ಗಳನ್ನು ಹೊತ್ತು ತರುತ್ತದೆ.

**ಏನಿದು 'ಮೆಟ್ ಗಾಲ'. ಈ ಶೋನಲ್ಲಿ ಪ್ರಿಯಾಂಕ ವಿಲಕ್ಷಣ ಉಡುಗೆ ತೊಟ್ಟಿದ್ದು ಏಕೆ?**

'ಗಾಲ' ಎನ್ನುವ ಕಾಸ್ಟ್ಯೂಮ್ ಸಂಸ್ಥೆಯು ಮೆಟ್ರೊಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್ ಸಂಸ್ಥೆಗೆ ಹಣಕಾಸು ಸಂಗ್ರಹಿಸುವ ಉದ್ದೇಶದಿಂದ 1948ರಿಂದ ಈ ಸೌಂದರ್ಯದ ಹಬ್ಬವನ್ನು ಆಯೋಜಿಸುತ್ತಿದೆ. ಪ್ರತಿವರ್ಷ ಒಂದು ವಿಷಯವನ್ನು ಆಧರಿಸಿ ಫ್ಯಾಷನ್ ಶೋ ನಡೆಯುತ್ತದೆ. ಈ ಕಾರ್ಯಕ್ರಮವನ್ನು ನ್ಯೂಯಾರ್ಕ್ ನಗರದ ಫ್ಯಾಷನ್ ಜಗತ್ತಿನ ಹೆಮ್ಮೆಯ ಕಿರೀಟ ಎಂದೇ ಬಿಂಬಿಸಲಾಗಿದೆ.

ಈ ಬಾರಿ ನಡೆದ ಫ್ಯಾಷನ್ ಶೋ ಮತ್ತು ಕಾಸ್ಟ್ಯೂಮ್ ಪ್ರದರ್ಶನದಲ್ಲಿ ಬಾಲಿವುಡ್ ಬೆಡಗಿ ದೀಪಿಕಾ ಪಡುಕೋಣೆ ಸಹ ಹೆಜ್ಜೆಹಾಕಿದ್ದರು. ಹಾಗಿದ್ದರೂ ಹೆಚ್ಚು ಜನಪ್ರಿಯವಾಗಿದ್ದು ಪ್ರಿಯಾಂಕಾ ಚೋಪ್ರಾ ಅವರ ಉಡುಗೆ ಮತ್ತು ಅಲಂಕಾರ.

ಪತಿ, ಹಾಲಿವುಡ್ ಗಾಯಕ ನಿಕ್ ಜೋನಸ್ ಜೊತೆ ರೆಡ್ ಕಾರ್ಪೆಟ್ ಮೇಲೆ ನಡು ಬಳುಕಿಸಿ ನಡೆದ ಪಿಗ್ಗಿಯ ಮೇಕಪ್ ಮತ್ತು ಕಾಸ್ಟ್ಯೂಮ್‌ಗಳು ಲೆವಿಸ್ ಕ್ಯಾರೊಲ್ ಅವರ ಚಿತ್ರಕಥೆಯನ್ನು ಆಧರಿಸಿ ನಿರ್ಮಾಣಗೊಂಡಿದ್ದ 'ಆಲಿಸ್ ಇನ್ ವಂಡರ್‌ಲ್ಯಾಂಡ್' ಚಿತ್ರದಿಂದ ಪ್ರೇರಣೆ ಪಡೆದಿತ್ತು. ಗುಲಾಬಿ ಬಣ್ಣದ ಬಾರ್ಬಿ ಗೌನ್ ತೊಟ್ಟಿದ್ದ ಬಾಲಿವುಡ್‌ನ ಗುಳಿಕೆನ್ನೆ ಸುಂದರಿ ದೀಪಿಕಾ ಪಡುಕೋಣೆ, ಪಫ್, ಹಾಗೂ ತಿಳಿ ಗುಲಾಬಿ ಬಣ್ಣದ ಹೇರ್ ಬೆಂಡ್ ಬಳಸಿ ಹೆರಳನ್ನು ಶೃಂಗರಿಸಿದ್ದರು. ಉಡುಗೆಗೆ ಒಪ್ಪುವ ಅಂದದ ಕಿವಿಯೋಲೆಗಳೊಂದಿಗೆ ತೊಟ್ಟಿದ್ದ ಬೆಳ್ಳಿಯ ಬ್ರೇಸ್‌ಲೆಟ್ ಅವರ ಸೌಂದರ್ಯವನ್ನು ಇಮ್ಮಡಿಗೊಳಿಸಿತ್ತು.

ಕಳೆದೆರಡು ವರ್ಷಗಳಿಂದ 'ಮೆಟ್ ಗಾಲ'ದಲ್ಲಿ ಭಾಗವಹಿಸುತ್ತಿರುವ ದೀಪಿಕಾ, ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ತುಸು ಹೆಚ್ಚೇ ಮೇಕಪ್ ಮೆತ್ತಿಕೊಂಡಿದ್ದರು. ಗಾಢ ಬಣ್ಣದ ತುಟಿ ರಂಗು ಹಾಗೂ ನಯನ ಶೃಂಗಾರದ ಜೊತೆಗೆ ಗ್ಲಿಟರ್ಸ್ ಬಳಸಿ ರ್‍ಯಾಂಪ್ ಮೇಲೆ ಮಿಂಚಿದ್ದರು.

ಈ ಬಾರಿಯ ಶೋಧ ವಿಷಯವಸ್ತು 'ಕ್ಯಾಂಪ್: ನೋಟ್ಸ್ ಆನ್ ಫ್ಯಾಷನ್' (Camp: Notes on Fashion) ಇದು ಸುಸಾನ್ ಸೊಂಟಾಗ್ (Susan Sontag) ಅವರು 1964ರಲ್ಲಿ ಬರೆದ 'ನೋಟ್ಸ್ ಆನ್ ಕ್ಯಾಂಪ್' ಎಂಬ ಪ್ರಬಂಧವನ್ನು ಆಧರಿಸಿತ್ತು.

■ ಅಭಿಲಾಷ ಬಿ.ಸಿ.



ಕೈಲಿ ಜೆನ್ನರ್



ಕಾರ್ಡಿ ಬಿ